2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 2/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವಿಶ್ವನಾಥ್ ಎನ್ ಸಿ | ಪಿಡಬ್ಲೂ -1 |
| ತಂದೆಯ ಹೆಸರು | - | ಚಂದ್ರಪ್ಪ | ಸಿಡಬ್ಲೂ -1 |
| ವಯಸ್ಸು | - | 34 ವರ್ಷ | |
| ಉದ್ಯೋಗ | - | ಆರಕ್ಷಕ ನಿರೀಕ್ಷಕರು, ಸೈಬರ್‌ಕ್ರೈಂ ಪೊಲೀಸ್ ಠಾಣೆ, ಚಿಕ್ಕಮಗಳೂರು | |
| ವಾಸ ಸ್ಥಳ | - | ಚಿಕ್ಕಮಗಳೂರು | |

ದಿನಾಂಕಃ 21.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ನಾನು ದಿನಾಂಕಃ 17.08.2018 ರಿಂದ 17.03.2021 ರವರೆಗೆ ಕಡೂರು ಪೊಲೀಸ್ ಠಾಣೆಯಲ್ಲಿ ಆರಕ್ಷಕರ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.
2. ದಿನಾಂಕ 28.08.2018 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ವೃತ್ತ ನಿರೀಕ್ಷಕರ ಆದೇಶದ ಮೇರೆಗೆ ನಾನು ಸಿಬ್ಬಂದಿಗಳಾದ ಚಾಸಾ.5, ಚಾಸಾ.4, ಚಾಸಾ.6, ಚಾಸಾ.8 ಮತ್ತು ಜೀಪ್ ಚಾಲಕನಾದ ನವೀನ್ ರವರೊಂದಿಗೆ ಇಲಾಖಾ ಜೀಪಿನಲ್ಲಿ ರಾತ್ರಿ ಗಸ್ತು ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಸಮಯದಲ್ಲಿ ದಿನಾಂಕ 29.08.2018 ರ ಬೆಳಗಿನ ಜಾವ 12.00 ಗಂಟೆಯಲ್ಲಿ ನಾವು ಬಸವೇಶ್ವರ ಚೆಕ್ ಪೋಸ್ಟಿನಲ್ಲಿ ಇದ್ದ

ಸಮಯದಲ್ಲಿ ನನಗೆ ಭಾತ್ಮಿದಾರರೊಬ್ಬರು ನನಗೆ ದೂರವಾಣಿ ಕರೆ ಮಾಡಿ ನಮ್ಮ ಠಾಣಾ ವ್ಯಾಪ್ತಿಯ ಕುಪ್ಪಾಳು ಬಳಿ ಇರುವ ಮೊರಾರ್ಜಿ ವಸತಿ ಶಾಲೆಯ ಬಳಿ ಎನ್ ಹೆಚ್ 206 ರಸ್ತೆಯಲ್ಲಿ ಯಾರೋ 6 ಜನ ಆಸಾಮಿಗಳು ಗೂಡ್ಸ್ ಗಾಡಿಯೊಂದನ್ನು ನಿಲ್ಲಿಸಿಕೊಂಡು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಸದರಿ ರಸ್ತೆಯಲ್ಲಿ ಹೋಗಿ ಬರುವ ವಾಹನಗಳನ್ನು ಅಡ್ಡಗಟ್ಟಲು ಪ್ರಯತ್ನಿಸುತ್ತಿರುವುದಾಗಿ ಮಾಹಿತಿ ನೀಡಿರುತ್ತಾರೆ. ಅದರಂತೆ ನಾನು ಮತ್ತು ಮೇಲೆ ಹೇಳಿದ ಸಿಬ್ಬಂದಿಗಳು ಕೂಡಲೇ ಎ ಪಿ ಎಂ ಸಿ ಮಾರ್ಕೆಟ್ ಗೆ ಹೋಗಿ ಅಲ್ಲಿ ಕೃಷಿ ವ್ಯಾಪಾರಕ್ಕೆಂದು ಬಂದಿದ್ದ ಚಾಸಾ.2 ಪ್ರಕಾಶ್ ಬಿನ್ ಶಿವಲಿಂಗಪ್ಪ, ವಯಸ್ಸು 40 ವರ್ಷ ಮತ್ತು ಪ್ರಕಾಶ್ ಬಿನ್ ಶಿವಲಿಂಗಪ್ಪ ವಯಸ್ಸು 35 ವರ್ಷ ರವರುಗಳಿಗೆ ನನಗೆ ಬಂದಿದ್ದ ಮಾಹಿತಿಯನ್ನು ತಿಳಿಸಿ ಅವರಿಗೆ ಪಂಚರಾಗಿ ಸಹಕರಿಸುವಂತೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ಅದರಂತೆ ಅವರು ಪಂಚರಾಗಿ ಸಹಕರಿಸಲು ಒಪ್ಪಿಸಿಕೊಂಡಿರುತ್ತಾರೆ. ಸದರಿ ನೋಟೀಸನ್ನು ನೋಡುತ್ತಿದ್ದು ಅದನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

3. ನಂತರ ಠಾಣೆಯಲ್ಲಿದ್ದ ಸಿಬ್ಬಂದಿಗಳಾದ ಚಾಸಾ.7 ಮತ್ತು ಚಾಸಾ.9 ರವರಿಗೆ ಮಾರುಕಟ್ಟೆಗೆ ರಕ್ಷಾ ಜೀಪನ್ನು ತರಲು ತಿಳಿಸಿರುತ್ತೇನೆ. ಸದರಿ ಸಿಬ್ಬಂದಿಗಳು ಬಂದ ಮೇಲೆ ಸದರಿ ಚಾಸಾ.7, ಚಾಸಾ.9, ಮೇಲೆ ಹೇಳಿದ ಸಿಬ್ಬಂದಿಗಳು ಮತ್ತು ಪಂಚರೊಂದಿಗೆ ರಾತ್ರಿ 12.20 ಗಂಟೆಗೆ ಎ ಪಿ ಎಂ ಸಿ ಯಿಂದ ಹೊರಟು ರಾತ್ರಿ 12.50 ಗಂಟೆಗೆ ಕುಪ್ಪಾಳು ಬಳಿ ಇರುವ

ಮೊರಾರ್ಜಿ ವಸತಿ ಶಾಲೆಯ ಹತ್ತಿರ ಹೋಗಿ ಜೀಪನ್ನು ಸುಮಾರು 100 ಮೀಟರ್ ದೂರದಲ್ಲಿ ನಿಲ್ಲಿಸಿ ಮರೆಯಾಗಿ ನಿಂತು ನೋಡಲಾಗಿ ಅಲ್ಲಿ ಸುಮಾರು 6 ಜನರು ರಸ್ತೆಯ ಬದಿಯಲ್ಲಿ ಇರುವುದು ಕಂಡು ಬಂತು.

(ಈ ಹಂತದಲ್ಲಿ ಸಾಕ್ಷಿಯು ವಿಶೇಷ ಕರ್ತವ್ಯದ ಮೇರೆಗೆ ಬೆಂಗಳೂರಿಗೆ ಹೋಗಿ ಅಲ್ಲಿಂದ ಕೇರಳಕ್ಕೆ ಹೋಗಬೇಕಾಗಿದೆ ಎಂದು ತಿಳಿಸಿ ಸಮಯ ಕೋರಿದ ಮೇರೆಗೆ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್